VIJAYA KARNATAKA

**Date:** February 9, 2015 **Page No.** 03

**Edition:** Mysore **Language: Kannada**

### ಚರ್ಚಾ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳ ವಾದ-ಪ್ರತಿವಾದ

# ಅಭಿವ್ಯಕ್ತಿ ಸ್ವಾತಂತ್ರ್ಯ ಸುತ್ತ ಬಿಸಿಬಿಸಿ ಚರ್ಚೆ

**ವಿಕ ಸುದ್ದಿಲೋಕ,** ಮೈಸೂರು

ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕಡಿವಾಣ ಇಲ್ಲದಿದ್ದರೆ ಆರೋಗ್ಯಕರ ಸಮಾಜ ನಿರ್ಮಾಣವಾಗದು. ಸಿನಿಮಾ, ಕಲೆ, ಬರವಣಿಗೆ ಇನ್ನಿತರ ಅಭಿವ್ಯಕ್ತ ಮಾಧ್ಯಮಗಳು ನಿಯಂತ್ರಣಕ್ಕೆ ಒಳಪಡದಿದ್ದರೆ ಸಮಾಜದಲ್ಲಿ ಕೆಟ್ಟ ಪರಿಣಾಮಗಳಾಗುತ್ತವೆ...

ಅಭಿವ್ಯಕ್ತಿ ಸ್ವಾತಂತ್ರ್ಯವಿದ್ದಾಗ ಮಾತ್ರ ವ್ಯಕ್ತಿ ವ್ಯಕ್ತಿಯ ನಡುವಿನ ಸಂಬಂಧ ವೃದ್ಧಿಯಾಗುತ್ತದೆ. ಪರಿಣಾಮಕಾರಿ ಸಂವಹನದಿಂದ ಹಲವು ಸಮಸ್ಯೆಗಳಿಗೆ ದೊರೆಯುತ್ತವೆ. ಹಾಗಾಗಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕಡಿವಾಣ ಬೇಡ...

ಇವು ರೋಟರಿ ಮೈಸೂರು ಮಿಡ್‌ಟೌನ್, ಎಸ್‌ಡಿಎಂಐಎಂಡಿ ಕಾಲೇಜಿನ ಸಹಯೋಗದಲ್ಲಿ ಭಾನುವಾರ ಚಾಮುಂಡಿ ಬೆಟ್ಟದ ಕಾಲೇಜು ಆವರಣದಲ್ಲಿ ಆಯೋಜಿಸಿದ್ದ 'ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕಡಿವಾಣ ಬೇಕೆ ಬೇಡವೆ ?' ಕುರಿತ ಚರ್ಚಾ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳ ನಡುವೆ ವ್ಯಕ್ತವಾದ ಅಭಿಪ್ರಾಯಗಳು.

ಸಮೂಹದಲ್ಲಿ ಅಥವಾ ಸಂಘ ಜೀವನದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಸಮಾಜ ಸಮ್ಮತ ನಡವಳಿಕೆಗಳನ್ನು ರೂಢಿಸಿಕೊಂಡು ಎಲ್ಲರಂತೆ ಬದುಕಬೇಕಿದೆ. ಹಾಗಾಗಿ ನಮ್ಮ ಅಭಿಪ್ರಾಯ ವ್ಯಕ್ತಪಡಿಸುವಾಗ ಕೆಲವೊಂದು ಮಿತಿಗೆ ಒಳಪಡಬೇಕಿದೆ ಎಂದು ಹಲವರು ಅಭಿಪ್ರಾಯಿಸಿದರು.

**ನಿಯಂತ್ರಣ ಅಗತ್ಯ:** ತಮಗೆ ತೋಚಿದಂತೆ ಮಾತನಾಡುತ್ತ ಸುಳ್ಳು ಭರವಸೆಗಳನ್ನು ನೀಡುವ ರಾಜಕಾರಣಿಗಳ ಕುರಿತು ಸಮಾಜದಲ್ಲಿ ಯಾವ ಮನೋಭಾವವಿದೆ ಎಂಬ ವಿಷಯ ಎಲ್ಲರಿಗೂ ತಿಳಿದಿದೆ. ಚಲನಚಿತ್ರಗಳ ಪ್ರದರ್ಶನ ನಿಯಂತ್ರಣಕ್ಕೆ ಸೆನ್ಸಾರ್ ಮಂಡಳಿ ಇದೆ. ಒಬ್ಬ ಕಲಾವಿದ ತನಗೆ ಬೇಕೆಂದ ರೀತಿಯಲ್ಲಿ ಚಿತ್ರಿಸುವಂತಿಲ್ಲ. ಆತನ ಪ್ರಯೋಗ ಸಮಾಜದಲ್ಲಿ ಯಾವುದೇ ರೀತಿಯಲ್ಲಿ ಕೆಟ್ಟ ಪರಿಣಾಮ ಉಂಟು ಮಾಡದಂತಿರಬೇಕು. ಪತ್ರಿಕೋದ್ಯಮದಲ್ಲಿ ಎಲ್ಲ ಸುದ್ದಿಗಳೂ ಪ್ರಸಾರ ಯೋಗ್ಯವಾಗಿರುವುದಿಲ್ಲ. ಒಂದು ವೇಳೆ ಅವು ಪ್ರಸಾರವಾದರೆ ಜನರು ಅದಕ್ಕೆ ನಕರಾತ್ಮಕ ಪ್ರತಿಕ್ರಿಯೆ ದೊರೆಯುತ್ತದೆ. ಸಂವಿಧಾನದತ್ತವಾಗಿ ದೊರೆಯುವ ಯಾವುದೇ ಸವಲತ್ತುಗಳನ್ನು ನಾವು ಕೆಲವೊಂದು ಮಿತಿಗಳಿಗೆ ಒಳಪಟ್ಟು, ವ್ಯವಸ್ಥೆಗೆ ಅದರಿಂದ ಯಾವುದೇ ಧಕ್ಕೆ ಬಾರದಂತೆ ಅದನ್ನು ನೋಡಿಕೊಳ್ಳಬೇಕಿದೆ. ಅಭಿವ್ಯಕ್ತಿ ಮಾಧ್ಯಮಗಳು ಮಿತಿಗೆ ಒಳಪಡಬೇಕು ಎಂದು ಕೆಲವು ವಿದ್ಯಾರ್ಥಿಗಳ ವಾದಿಸಿದರು.

**ಕಡಿವಾಣ ಬೇಡ :** ಎಲ್ಲ ಸಮಸ್ಯೆಗಳು ನ್ಯಾಯಾಲಯದಲ್ಲಿಯೆ ಬಗೆಹರಿಯುವುದಿಲ್ಲ. ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಗ್ರಾಮದ ಹಲವು ಸಮಸ್ಯೆಗಳು ಪಂಚಾಯಿತಿಯಲ್ಲಿಯೇ ತೀರ್ಮಾನವಾಗುತ್ತವೆ. ಇದಲ್ಲದೆ ಕುಟುಂಬದಲ್ಲಿ ನಿರ್ಮಾಣವಾಗುವ ಅನೇಕ ಸಮಸ್ಯೆಗಳು ಅಲ್ಲಿಯೆ ಬಗೆಹರಿಯುತ್ತವೆ. ಅಭಿವ್ಯಕ್ತಿಗೆ ದೊರೆತ ಸಂಪೂರ್ಣ ಸ್ವಾತಂತ್ರ್ಯವೇ ಇದಕ್ಕೆ ಪ್ರಮುಖ ಕಾರಣವಾಗಿದೆ. ಮುಕ್ತವಾಗಿ ಮಾತನಾಡುವ ಅವಕಾಶವಿದ್ದಾಗ ವ್ಯಕ್ತಿ ವ್ಯಕ್ತಿಯ ನಡುವಿನ ಸಂಬಂಧ ವೃದ್ಧಿಯಾಗುತ್ತದೆ. ಪರಿಣಾಮಕಾರಿ ಸಂವಹನದಿಂದ ಹಲವು ಸಮಸ್ಯೆಗಳಿಗೆ ದೊರೆಯುತ್ತವೆ. ಹಾಗಾಗಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕಡಿವಾಣ ಬೇಡ ಎಂದು ಮತ್ತೆ ಕೆಲವರ ಅಭಿಪ್ರಾಯವಾಗಿತ್ತು. ರಾಜ್ಯದ ನಾನಾ ಜಿಲ್ಲೆಗಳಿಂದ 60 ಕ್ಕೂ ಹೆಚ್ಚು ಮಂದಿ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಇನ್‌ಫೋಸಿಸ್‌ನ ಲೈಫ್ ಕೋಚ್ ಛಾಯಾ ಶ್ರೀವಾತ್ಸವ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪ್ರೊ.ಬಿ.ಎನ್. ಬಾಲಾಜಿ ವಿಜೇರಿಗೆ ಬಹುಮಾನ ವಿತರಿಸಿದರು. ಸಿಬ್ಬಂದಿ ಹಾಜರಿದ್ದರು.